ಈ ಚಿತ್ರದಲ್ಲಿ ಒಬ್ಬ ಹುಡುಗ ಮೊಬೈಲನ್ನು ಮೊಬೈಲಿನಲ್ಲಿ ಗೇಮ್ ಆಡುತ್ತಿದ್ದಾನೆ. ಇನ್ನೊಂದು ಹುಡುಗಿ ಕೂಡ ಕಂಪ್ಯೂಟರ್ನಲ್ಲಿ ಗೇಮ್ ಆಡುತ್ತಿದ್ದಾಳೆ ಈ ಗೇಮ್ ಆಡುವುದರಿಂದ ಸುಮ್ಮನೆ ವೃಥಾ ಸಮಯ ವ್ಯರ್ಥವಾಗುತ್ತದೆ. ಮತ್ತು ಇದರಿಂದ ಹೆಚ್ಚಿಗೆ ಜ್ಞಾನ ಸಿಗುವುದಿಲ್ಲ. ಕೇವಲ ಮನೋರಂಜನೆ ಸಿಗುತ್ತದೆ ಮತ್ತು ಸಮಯ ಹಾಳಾಗುತ್ತದೆ ಆದುದರಿಂದ ಈ ವಿದ್ಯಾರ್ಥಿಗಳು ಇದನ್ನು ಬಿಟ್ಟು ಈ ಎಲೆಕ್ಟ್ರಿಕ್ ಸಾಧನಗಳಲ್ಲಿ ಜ್ಞಾನವನ್ನು ಅರಸುವ ಕೆಲಸ ಮಾಡಬೇಕು.

ಈ ಚಿತ್ರದಲ್ಲಿರುವ ಬಾಲಕ ಬಾಲಕಿಯರು ದೇವಸ್ಥಾನದ ಮುಂದೆ ಇರುವ ಕಸವನ್ನೆಲ್ಲಾ ತೆಗೆದು ಹಾಕುತ್ತಿದ್ದಾರೆ ಇವರು ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ ಮತ್ತು ಸ್ವಚ್ಛತೆಯಿಂದ ಆರೋಗ್ಯ ವೃದ್ಧಿಸುತ್ತದೆ ಜನಗಳ ಆರೋಗ್ಯವನ್ನು ಕಾಪಾಡಲು ಊರನ್ನು ಸ್ವಚ್ಛವಾಗಿಡಲು ಇಂಥ ಕೆಲಸಗಳು ಆಗುತ್ತಿರಬೇಕು ಶ್ರಮದಾನ ಮಾಡಿ ಸ್ವಚ್ಛತೆಯನ್ನು ಕಾಪಾಡಿದರೆ ದೇವರು ಕೂಡ ಮೆಚ್ಚುತ್ತಾನೆ.

ಈ ಚಿತ್ರದಲ್ಲಿ ಭಿಕ್ಷುಕ ಅಲ್ಲಿ ಗೆ ತಟ್ಟೆಗಳಲ್ಲಿ ಉಳಿದ ಊಟವನ್ನು ಎತ್ತಿ ತಿನ್ನುತ್ತಿದ್ದಾನೆ. ಇದು ನೋಡಲು ಬಹಳ ನೋವಿನ ಸಂಗತಿಯಾಗಿದೆ ಬಹಳಷ್ಟು ಆಹಾರ ವ್ಯರ್ಥವಾಗಿದೆ ಈ ರೀತಿ ಆಹಾರವನ್ನು ವ್ಯರ್ಥ ಮಾಡುವುದರಿಂದ ಹಣ ಸಮಯ ಹಾಗೂ ಆಹಾರದ ಪೋಲಾಗುತ್ತದೆ ಇದನ್ನು ತಪ್ಪಿಸಲು ಕ್ರಮ ಕೈಗೊಳ್ಳಬೇಕು.

ಈ ಎರಡು ಚಿತ್ರಗಳಲ್ಲಿ ಒಂದು ಚಿತ್ರದಲ್ಲಿ ಕಾಡು ಹಸಿರುಮಯವಾಗಿದೆ. ಇನ್ನೊಂದು ಚಿತ್ರದ ಕಾಡಿನಲ್ಲಿ ಮಳೆ ಇಲ್ಲದೆ ಎಲೆಗಳೆಲ್ಲ ಉದುರಿ ಬೆಂಗಡಾಗಿದೆ. ಹಸಿರು ಕಾಡಿನಲ್ಲಿ ಎಲ್ಲಾ ಪ್ರಾಣಿ ಪಕ್ಷಿ ಸಸ್ಯಗಳಿಗೆ ಸಂತೋಷಮಯವಾದ ಸನ್ನಿವೇಶ ಕಾಣುತ್ತಿದೆ ಆದರೆ

ಒಣಗಿದ ಕಾಡಿನಲ್ಲಿ ಯಾವ ಪ್ರಾಣಿ ಪಕ್ಷಿಗೂ ಆಹಾರ ಸಿಗುವುದಿಲ್ಲ ಮತ್ತು ಸಸ್ಯಗಳು ಬಿಕೋ ಎನ್ನುತ್ತಿವೆ. ಹಸಿರು ಕಾಡೆ ಕಣ್ಣಿಗೆ ತೃಪ್ತಿಯನ್ನು ನೀಡುತ್ತಿದೆ.

ಈ ಚಿತ್ರದಲ್ಲಿನ ಸೂಚನಾ ಫಲಕವು ನೀರು ಎಷ್ಟು ಮಹತ್ವವಾದದ್ದು ಎಂಬುದನ್ನು ತಿಳಿಸುತ್ತಿದೆ ನೀರು ಅತ್ಯಮೂಲ್ಯವಾಗಿದೆ ಮಳೆ ನೀರೆ ನಮಗೆ ನೀರಿನ ಮೂಲವಾಗಿದೆ ಈಗ ಇರುವ ನೀರನ್ನು ನಾವು ಪೋಲು ಮಾಡಿದರೆ ಮುಂದಿನ ಪೀಳಿಗೆಗೆ ನೀರಿನ ಅಭಾವ ಎದುರಾಗಬಹುದು ಬರಗಾಲದ ಸಂದರ್ಭಗಳಲ್ಲಿ ನೀರು ಸಿಗುವುದು ಕಷ್ಟವಾಗುತ್ತಿದೆ ಮುಂದಿನ ಅಭಾವದ ಪರಿಸ್ಥಿತಿ ತಂದುಕೊಳ್ಳ ಬಾರದಿದ್ದರೆ ನಾವು ನೀರನ್ನು ಪೋಲು ಮಾಡಬಾರದು.

ಈ ಬಾಲಕಿಯು ಮನೆಯ ಕೆಲಸವನ್ನು ಮಾಡುತ್ತಿದ್ದಾಳೆ ಮೊಸರೆಯನ್ನು ತಿಕ್ಕಿ ತೊಳೆದು ಸ್ವಚ್ಛ ಮಾಡಿ ಮನೆಯ ಕೆಲಸ ಮುಗಿಸಿ ಶಿಸ್ತಾಗಿ ಸಮವಸ್ತ್ರವನ್ನು ಧರಿಸಿ ಶಾಲೆಗೆ ಹೊರಟಿದ್ದಾಳೆ ಈ ಬಾಲಕಿ ಮಾದರಿ ಬಾಲಕಿಯಾಗಿದ್ದಾಳೆ ಇದು ಎಲ್ಲಾ ವಿದ್ಯಾರ್ಥಿಗಳಿಗೆ ಒಂದು ಪಾಠವಾಗಿದೆ ವಿದ್ಯಾರ್ಥಿಗಳು ಮನೆಯಲ್ಲಿನ ಕೆಲಸಗಳಲ್ಲಿ ಕೈಜೋಡಿಸಬೇಕು ಜೊತೆಗೆ ಓದಿಕೊಳ್ಳಬೇಕು ವಿದ್ಯಾಭ್ಯಾಸ ಸರಿಯಾಗಿ ಮಾಡಬೇಕು ಸರಿಯಾದ ಸಮಯಕ್ಕೆ ಶಾಲೆಗೆ ಹೊರಡಬೇಕು ಎಂದು ಈ ಚಿತ್ರದಲ್ಲಿ ತಿಳಿಯುತ್ತಿದೆ ಈ ಹುಡುಗಿಗೆ ಮನೆಯ ಕೆಲಸದ ಜವಾಬ್ದಾರಿಯು ಇದೆ ಮನೆಯ ಕಡೆಗೆ ಗಮನವೂ ಇದೆ ಜೊತೆಗೆ ಶಾಲೆಯ ಕಡೆಗೆ ಗಮನವೂ ಕೂಡ ಇದೆ ಈ ಹುಡುಗಿ ಮಾದರಿ ಹುಡುಗಿ ಯಾಗಿದ್ದಾಳೆ.

ಈ ಮೇಲಿನ ಚಿತ್ರದಲ್ಲಿ ಒಂದು ಕೊಪ್ಪರಿಗೆ ಅಥವಾ ಕೊಡದ ರೂಪದಲ್ಲಿ ಒಂದು ನದಿ ನೀರಿನಲ್ಲಿ ಒಂದು ಕೊಡವು ತೇಲಿ ಬರುತ್ತಿದೆ ಅದೃಷ್ಟವಶಾತ್ ಒಬ್ಬ ವ್ಯಕ್ತಿಗೆ ಕೊಡವು ಕೈಗೆ ಸಿಕ್ಕಿದೆ ಅವನು ಆ ಕೊಡದಲ್ಲಿ ಕೈ ಹಾಕಿದ್ದಾನೆ ಕೈ ಹಾಕಿ ಅವನು ಓಡುತ್ತಿರುವ ರೀತಿ

ನೋಡಿದರೆ ಅವನಿಗೆ ಆ ಕೊಡದಲ್ಲಿ ನಿಧಿ ಸಿಕ್ಕಿರುವ ಹಾಗಿದೆ ಅವನ ಅದೃಷ್ಟ ಖುಲಾಯಿಸಿದೆ ಅವನು ಓದುತ್ತಿದ್ದಾನೆ ಮನೆಯ ಮಂದಿಗೆಲ್ಲ ಈ ವಿಚಾರ ತಿಳಿಸಿ ಅವನು ಖುಷಿಯಿಂದ ನನ್ನ ಜೀವನ ಉತ್ತಮಗೊಳ್ಳಬಹುದೆಂದು ಅವನು ಯೋಚಿಸಿದ್ದಾನೆ ಆದರೆ ಈ ನಿಧಿಯು ಯಾರಿಗೆ ಸೇರಬೇಕು ಸರ್ಕಾರಕ್ಕೆ ಸೇರಬೇಕು ಈ ಆಲೋಚನೆಯೂ ಕೂಡ ಅವನಿಗೆ ಇರಬಹುದು ಮಾಡಿದ್ದರೆ ಈ ನಿಧಿಯನ್ನು ಅವನು ಸರ್ಕಾರಕ್ಕೆ ಒಪ್ಪಿಸಲು ಓಡಿ ಹೋಗುತ್ತಿರಬಹುದು.

ಆಯ್ಕೆ ಮಾಡಿದ ಚಿತ್ರದ ಸಂಖ್ಯೆ ಎರಡು ಚಿತ್ರದ ಶೀರ್ಷಿಕೆ ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲಗೊಳಿಸಿ

ಚಿತ್ರದಲ್ಲಿ ಒಬ್ಬ ಬಾಲಕ ಗಾರೆ ಕೆಲಸವನ್ನು ಮಾಡುತ್ತಿದ್ದಾನೆ ಇಟ್ಟಿಗೆಯನ್ನು ತನ್ನ ತಲೆಯ ಮೇಲೆ ಹೊತ್ತುಕೊಂಡು ಹೋಗುತ್ತಿದ್ದಾನೆ ಇದು ತಪ್ಪು ಇದು ಅಪರಾಧದ ಕೆಲಸವಾಗಿದೆ ವಿದ್ಯಾರ್ಥಿಗಳು ಕೂಲಿ ಮಾಡುವ ಹಾಗಿಲ್ಲ ಅವನ ಬಟ್ಟೆಗಳು ನೋಡಿದರೆ ಅವನು ಬಡತನದ ಹುಡುಗ ಎಂದು ಗೊತ್ತಾಗುತ್ತಿದೆ ಮನೆಯಲ್ಲಿ ಎಷ್ಟೇ ಕಷ್ಟ ಇರಲಿ, ಬಾಲಕರು ಕೂಲಿ ಕೆಲಸ ಮಾಡಬಾರದು ಎಂಬ ನಿಯಮ ಇದೆ ಆದರೂ ಅವನ ಮನೆಯಲ್ಲಿ ಎಷ್ಟು ಕಷ್ಟವೋ ಅಥವಾ ಎಷ್ಟು ಬಡತನವೋ ಕಾಣೆ ಅವರ ತಂದೆ ತಾಯಿ ಯಿಂದ ಇರಬಹುದು ಅಥವಾ ತಂದೆ ತಾಯಿ ಇಲ್ಲದಿರಬಹುದು ಅಥವಾ ಅವನಿಗೆ ಕಾಳಜಿ ವಹಿಸುವವರು ಯಾರು ಇಲ್ಲವೋ ಅಥವಾ ಮನೆಯ ಜವಾಬ್ದಾರಿ ಅವನ ಮೇಲೆ ಇದೆಯೋ ಅದಕ್ಕೆ ಈ ರೀತಿ ಅವನು ಕೆಲಸ ಮಾಡುತ್ತಿದ್ದಾನೆ.

ಈ ಚಿತ್ರದಲ್ಲಿ ಒಬ್ಬ ಬೈಕ್ ಸವಾರ ರಸ್ತೆಯ ಮೇಲೆ ಹೊರಟಿದ್ದಾನೆ ಮತ್ತು ಸಿಗ್ನಲ್ ಕೆಂಪು

ಸಿಗ್ನಲ್ ನೋಡಿ ತನ್ನ ಬೈಕನ್ನು ನಿಲ್ಲಿಸಿದ್ದಾನೆ ಯಾವಾಗ ಹಸಿರು ಸಿಗ್ನಲ್ ಬೀಳುತ್ತದೆಯೋ ಅವನು ಮುಂದಕ್ಕೆ ಹೋಗಬಹುದು ಯಾವಾಗಲೂ ಸಿಗ್ನಲ್ ದಾಟುವಾಗ ಸಿಗ್ನಲ್ ಅನ್ನು ಗಮನಿಸಿ ಹೋಗಬೇಕು ಅವಸರಿಸಬಾರದು ಹಸಿರು ಸಿಗ್ನಲ್ ಬೀಳುವವರೆಗೂ ಕಾದು ಮುಂದಕ್ಕೆ ಹೋಗಬೇಕು ಹೀಗಾದಲ್ಲಿ ಅವಘಡಗಳು ಸಂಭವಿಸದೆ ಇರುತ್ತದೆ ಮೈಯೆಲ್ಲಾ ಕಣ್ಣಾಗಿ ಎಚ್ಚರಿಕೆಯಿಂದ ರಸ್ತೆಯಲ್ಲಿ ವಾಹನಗಳನ್ನು ಓಡಿಸಬೇಕು.

ಸೂಚನಾ ಫಲಕಗಳ ಸೂಚನೆಯನ್ನು ಪಾಲಿಸದಿದ್ದರೆ ಅಪಘಾತವಾಗಬಹುದು ಜೀವಕ್ಕೆ ಹಾನಿಯಾಗಬಹುದು ಮನುಷ್ಯರು ಆಸ್ಪತ್ರೆಗೆ ವಾಹನಗಳು ಗ್ಯಾರೇಜಿಗೆ ಹೋಗುತ್ತವೆ ಜೊತೆಗೆ ಪೊಲೀಸ್ ಕೇಸ್ ಆಗಬಹುದು ಪೊಲೀಸರು ಕೇಸ್ ಮಾಡಿ ಅವರಿಗೆ ದಂಡ ವಿಧಿಸಬಹುದು ಜೈಲು ಶಿಕ್ಷೆ ಆಗಬಹುದು ಆದುದರಿಂದ ಸೂಚನಾ ಫಲಕಗಳ ಸೂಚನೆಯನ್ನು ಪಾಲಿಸಬೇಕು.

ನಾವು ಶಾಲೆಯಲ್ಲಿ ಶಿಕ್ಷಕರು ನೀಡುವ ಸೂಚನೆಗಳನ್ನು ಪಾಲಿಸುತ್ತೇವೆ ಶಿಕ್ಷಕರು ನಿಶಬ್ದವಾಗಿ ಪಾಠ ಕೇಳಬೇಕೆಂದು ಹೇಳುತ್ತಾರೆ ಅವರು ನಮ್ಮ ಒಳ್ಳೆಯದಕ್ಕೆ ಹೇಳುತ್ತಾರೆ ಇದರಿಂದ ನಮ್ಮ ಜ್ಞಾನ ಬೆಳೆಯುತ್ತದೆ ಶಿಕ್ಷಕರು ತಮಗೆ ಬೇಗ ಮಲಗಲು ಮತ್ತು ಬೇಗ ಎದ್ದು ವಿದ್ಯಾಭ್ಯಾಸ ಮಾಡಲು ಹೇಳುತ್ತಾರೆ ಮತ್ತು ಸ್ವಚ್ಛತೆಯಿಂದ ಇರಲು ಮತ್ತು ಶುಭ್ರವಾದ ಸಮವಸ್ತ್ರಗಳನ್ನು ಧರಿಸಲು ನಮಗೆ ಸೂಚನೆಗಳನ್ನು ಕೊಡುತ್ತಾರೆ.

ರಸ್ತೆಯ ಪಕ್ಕ ಇರುವ ಸೂಚನಾ ಫಲಕ ಒಂದು ಮುಂದೆ ರಸ್ತೆಯ ರಸ್ತೆಯಲ್ಲಿ ಉಬ್ಬು ತಗ್ಗುಗಳಿವೆ ಎಂಬುದನ್ನು ಸೂಚಿಸುತ್ತದೆ ಎಲ್ಲಾ ವಾಹನ ಸವಾರರು ಈ ಸೂಚನಾ ಫಲಕ ನೋಡಿ ಮುಂದೆ ಉಬ್ಬು ತಗ್ಗು ಇರುವುದನ್ನು ನೋಡಿ ತಮ್ಮ ವೇಗವನ್ನು ಕಡಿಮೆ ಮಾಡುತ್ತಾರೆ ಮತ್ತು ಹುಬ್ಬುಗಳನ್ನು ನಿಧಾನವಾಗಿ ಹತ್ತಿ ಇಳಿಸಿ ಹೋಗುತ್ತಾರೆ ಈ ಸೂಚನಾ ಫಲಕವು ಬಹಳಷ್ಟು ಪ್ರಾಣಗಳನ್ನು ಉಳಿಸಲು ಕಾರಣವಾಗಿದೆ ಹಾಗಾಗಿ ಈ

ಸೂಚನಾ ಫಲ ನನಗೆ ಇಷ್ಟ.